KACM710008922026

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

ಉಪಸ್ಥಿತರು

ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕಃ **18** ನೇ ಜುಲೈ **2026**

**ಅಸಲು ದಾವಾ ಸಂಖ್ಯೆ 183/2026**

ವಾದಿ/ಯರುಃ

ಸಿ.ಸಿ.ರಾಜು ಬಿನ್ ಚಂದ್ರಪ್ಪ, 40 ವರ್ಷ. ವ್ಯವಸಾಯ ವೃತ್ತಿ, ವಾಸಃ ಕೆ.ಚಟ್ನನಹಳ್ಳಿ ಗ್ರಾಮ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಹೆಚ್.ಶಿವಶಂಕರ್ ನಾಯಕ್, ವಕೀಲರು)

-ವಿರುದ್ಧ-

ಪ್ರತಿವಾದಿ/ಯರುಃ

1) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆ, ತರೀಕೆರೆ.
3) ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆ.ಚಟ್ನನಹಳ್ಳಿ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು.
4) ಮುಖ್ಯೋಪಾಧ್ಯಾಯರು, ಅಕ್ಷರ ವಿದ್ಯಾನಿಕೇತನ ಶಾಲೆ, ಚಿಕ್ಕಜಾಜೂರು, ಹೊಳಲ್ಕೆರೆ ತಾಲ್ಲೂಕು.
5) ಪ್ರಾಂಶುಪಾಲರು, ರಾಘವೇಂದ್ರ ಹೈಟೆಕ್ ಪ್ರಿಯುನಿವರ್ಸಿಟಿ ಕಾಲೇಜ್, ಎಸ್.ಎಸ್. ಲೇಔಟ್, ಬಿ. ಬ್ಲಾಕ್, ದಾವಣಗೆರೆ.

Visit **ecourts.gov.in** for updates or download mobile app "**eCourts Services**" from Android or iOS

KACM710008922026

6) ಮುಖ್ಯಸ್ಥರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಭಾಗ್ಯಲಕ್ಷ್ಮಿ ಯೋಜನಾ ವಿಭಾಗ, ತರೀಕೆರೆ.

(1 ರಿಂದ 3, 6 ನೇ ಪ್ರತಿವಾದಿ ಪರ ಃ ಸಹಾಯಕ ಸರ್ಕಾರಿ ವಕೀಲರು, ತರೀಕೆರೆ.
5 ನೇ ಪ್ರತಿವಾದಿ ಪರ ಃ ಶ್ರೀ ಟಿ.ಆರ್.ಆನಂದ್, ವಕೀಲರು.
4 ನೇ ಪ್ರತಿವಾದಿಃ ಏಕತರ್ಫಿಯಾಗಿರುತ್ತಾರೆ.)

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 30.04.2026 | | |
| 2 | ದಾವಾ ಸ್ವರೂಪ | ನಿರ್ದೇಶನ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 02.07.2026 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 18.07.2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 00 | 02 | 18 |

## - ತೀರ್ಪು -

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ತನ್ನ ಮಗಳ ಶಾಲಾ ದಾಖಲಾತಿಗಳಲ್ಲಿ ತನ್ನ ಹೆಸರನ್ನು ರಾಜಪ್ಪ.ಸಿ.ಸಿ. ಎಂಬುದರ ಬದಲಾಗಿ ಸಿ.ಸಿ.ರಾಜು ಎಂದು ತಿದ್ದುಪಡಿ ಮಾಡುವಂತೆ ಪ್ರತಿವಾದಿಯರಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2.** ವಾದಿಯ ವಾದಪತ್ರದಲ್ಲಿನ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇದೆ ಃ

ವಾದಿ ಮತ್ತು ಅವರ ಪತ್ನಿಯಾದ ರೇಣುಕ ದಂಪತಿಗಳಿಗೆ ಐಶ್ವರ್ಯ.ಸಿ.ಆರ್ ಎಂಬ ಮಗಳು ದಿನಾಂಕ 19.03.2010 ರಂದು ಕೆ.ಚಟ್ಟನಹಳ್ಳಿ ಗ್ರಾಮ,

Visit **ecourts.gov.in** for updates or download mobile app "**eCourts Services**" from Android or iOS

ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕಿನಲ್ಲಿ ಜನಿಸಿದ್ದು, ನಂತರ ವಾದಿಯು 3 ನೇ ಪ್ರತಿವಾದಿಯ ಬಳಿ ದಾಖಲಾತಿ ನಂ.20/2015-16 ರಂತೆ 1 ನೇ ತರಗತಿಗೆ ದಾಖಲಿಸಿದ್ದು, ಶಾಲೆಗೆ ದಾಖಲಿಸುವ ಸಂದರ್ಭದಲ್ಲಿ ವಾದಿಯ ಹೆಸರನ್ನು ಸಿ.ಸಿ.ರಾಜು ಎಂದು ಸರಿಯಾಗಿ ಹೇಳಿ ದಾಖಲಿಸಿದ್ದು, ಆದರೂ ಸದರಿ ಶಾಲೆಯ ದಾಖಲಾತಿಗಳಲ್ಲಿ 3 ನೇ ಪ್ರತಿವಾದಿಯ ಕೈತಪ್ಪಿನಿಂದ ವಾದಿಯ ಹೆಸರು ರಾಜಪ್ಪ.ಸಿ.ಸಿ ಎಂದು ತಪ್ಪಾಗಿ ನಮೂದಾಗಿರುತ್ತದೆ. ವಾದಿಯು ಮುಂದುವರೆದು ಹೇಳುವುದೇನೆಂದರೆ, ನಂತರ ವಾದಿಯ ಮಗಳಾದ ಐಶ್ವರ್ಯ.ಸಿ.ಆರ್ ಇವರನ್ನು 4 ನೇ ಪ್ರತಿವಾದಿಯ ಬಳಿ ದಾಖಲಾತಿ ನಂ.217/22-23 ರಂತೆ 8 ರಿಂದ 10 ನೇ ತರಗತಿಗೆ ದಾಖಲಿಸಿದ್ದು, ನಂತರ 5 ನೇ ಪ್ರತಿವಾದಿಯ ಬಳಿ ದಾಖಲಾತಿ ನಂ.2/25-26 ರಂತೆ 1 ನೇ ಪಿಯುಸಿಗೆ ದಾಖಲು ಮಾಡಿದ್ದು, ಸದರಿ ಶಾಲಾ ಹಾಗೂ ಕಾಲೇಜು ದಾಖಲಾತಿಗಳಲ್ಲಿ ಸಹ 3 ನೇ ಪ್ರತಿವಾದಿಯ ಕೈತಪ್ಪಿನಿಂದ ಆದಂತಹ ತಪ್ಪು ಮುಂದುವರೆದಿದ್ದು, ಈ ರೀತಿಯ ತಪ್ಪು ನಮೂದು ಆ ಸಮಯದಲ್ಲಿ ವಾದಿಯ ಗಮನಕ್ಕೆ ಬಂದಿರುವುದಿಲ್ಲ ಹಾಗೂ ಕಾನೂನಿನ ಅರಿವು ಇಲ್ಲದೇ ಇರುವ ಕಾರಣ ವಾದಿಯು ಈ ತಪ್ಪನ್ನು ಸರಿ ಪಡಿಸಿಕೊಂಡಿರುವುದಿಲ್ಲ.

3. ವಾದಿಯು ಮುಂದುವರೆದು ಹೇಳುವುದೇನೆಂದರೆ, ಈ ಮೇಲ್ಕಂಡ ತಪ್ಪುಗಳಿಂದ ವಾದಿಯ ಮುಂದಿನ ವ್ಯವಹಾರಕ್ಕೆ ಹಾಗು ತನ್ನ ಮಗಳ ಮುಂದಿನ ವಿದ್ಯಾಭ್ಯಾಸಕ್ಕೂ ಸಹ ತೊಂದರೆಯಾಗುತ್ತಿದ್ದು, ವಾದಿಯ ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ ಮತ್ತು ಇತರೆ ಎಲ್ಲಾ ದಾಖಲಾತಿಗಳಲ್ಲೂ ವಾದಿಯ ಹೆಸರು ಸಿ.ಸಿ.ರಾಜು ಎಂದು

Visit **ecourts.gov.in** for updates or download mobile app "**eCourts Services**" from Android or iOS

ನಮೂದಾಗಿರುತ್ತದೆ. ಸದರಿ ತಪ್ಪಿನ ತಿದ್ದುಪಡಿಯನ್ನು ವಾದಿಯು 3 ನೇ ಪ್ರತಿವಾದಿಯ ಹತ್ತಿರ ವಿಚಾರಿಸಿದಾಗ ತಾವುಗಳು ನ್ಯಾಯಾಲಯದ ಆದೇಶ ಇಲ್ಲದೇ ತಿದ್ದುಪಡಿ ಮಾಡುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ. ಆದ್ದರಿಂದ ವಾದಿಯ ಮಗಳ ಶಾಲಾ ದಾಖಲಾತಿಗಳಲ್ಲಿ ವಾದಿಯ ಹೆಸರನ್ನು ರಾಜಪ್ಪ.ಸಿ.ಸಿ. ಎಂಬುದರ ಬದಲಾಗಿ ಸಿ.ಸಿ.ರಾಜು ಎಂದು ನಮೂದಿಸುವಂತೆ ವಾದಿಯು ವಕೀಲರ ಮೂಲಕ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 80(2) ರಡಿಯಲ್ಲಿ ಪ್ರತಿವಾದಿಯರಿಗೆ ನೋಟೀಸ್ ನೀಡಿದ್ದು, ಸದರಿ ನೋಟೀಸಿಗೆ ಪ್ರತಿವಾದಿಯರು ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ

4. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, 4 ನೇ ಪ್ರತಿವಾದಿಯು ನಾಯಾಲಯಕ್ಕೆ ಹಾಜರಾಗದೇ ಏಕತರ್ಫಿಯಾಗಿರುತ್ತಾರೆ. 1 ರಿಂದ 3 ಮತ್ತು 6 ನೇ ಪ್ರತಿವಾದಿಯರು ಸಹಾಯ ಸರ್ಕಾರಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ, 2 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, 1, 3 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಸದರಿ ಪ್ರತಿವಾದ ಪತ್ರವನ್ನು ಪರಿಗಣಿಸುವಂತೆ ಸಹಾಯ ಸರ್ಕಾರಿ ವಕೀಲರು ಮೆಮೋ ಸಲ್ಲಿಸಿರುತ್ತಾರೆ. 5 ನೇ ಪ್ರತಿವಾದಿ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ಪ್ರತ್ಯೇಕ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ.

5. 2 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ಹೆಸರು ತಿದ್ದುಪಡಿ ಕೋರಿ ಪ್ರತಿವಾದಿಯರಿಗೆ ನೋಟೀಸು ನೀಡಿರುವುದನ್ನು ಒಪ್ಪಿಕೊಂಡು, ಉಳಿದ ವಾದ

Visit **ecourts.gov.in** for updates or download mobile app "**eCourts Services**" from Android or iOS

ಪತ್ರದ ಎಲ್ಲಾ ಅಂಶಗಳನ್ನು ಅಲ್ಲಗಳೆದಿದ್ದು, ಮುಂದುವರೆದು ವಾದಪತ್ರದ ಸಂಗತಿಗಳನ್ನು ವಾದಿಯೇ ರುಜುವಾತು ಪಡಿಸಬೇಕಾಗಿದ್ದು, ವಾದಿಯ ಹೆಸರು ರಾಜಪ್ಪ.ಸಿ.ಸಿ. ಎಂದು ಶಾಲಾ ದಾಖಲಾತಿ ನಮೂದಾಗಿರುವುದು ತಿಳಿದು ಬಂದಿದೆ, ಸಿ.ಸಿ.ರಾಜು ಎಂದು ಹೆಸರು ತಿದ್ದುಪಡಿಗೆ ಕೋರಿ ಈ ಪ್ರತಿವಾದಿಗಳಿಗೆ ನೋಟಿಸ್ ನೀಡಿದ್ದು, ಆದರೆ ನೋಟೀಸ್‌ಗೆ ಪೂರಕವಾಗಿ ಯಾವುದೇ ದಾಖಲೆ ಅಥವಾ ಆದೇಶಗಳನ್ನು ಹಾಜರುಪಡಿಸದಿರುವ ಕಾರಣ ಈ ಪ್ರತಿವಾದಿಯು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ ಹಾಗೂ ಸದರಿ ನೋಟೀಸಿನಂತೆ ತಿದ್ದುಪಡಿ ಮಾಡುವ ಅಧಿಕಾರವನ್ನು 1 ರಿಂದ 6 ನೇ ಪ್ರತಿವಾದಿಯರು ಹೊಂದಿರುವುದಿಲ್ಲ. ವಾದಿಯ ಹೆಸರು ಸಿ.ಸಿ.ರಾಜು ಎಂದು ಆಧಾರ್ ಕಾರ್ಡ್ ಮತ್ತು ಇತರೆ ದಾಖಲೆಗಳಲ್ಲಿ ನಮೂದಾಗಿದೆ ಎಂದು ಹೇಳಿರುವ ವಿಚಾರವನ್ನು ವಾದಿಯೇ ದಾಖಲೆಗಳ ಸಮೇತ ರುಜುವಾತು ಪಡಿಸತಕ್ಕದ್ದು. ಪ್ರತಿವಾದಿಯರ ತಪ್ಪಿನಿಂದ ಶಾಲಾ ದಾಖಲಾತಿ ವಾದಿಯ ಹೆಸರು ತಪ್ಪಾಗಿ ಹೆಸರು ನಮೂದಾಗಿರುವುದಿಲ್ಲ ಕಾರಣ ವಾದಿಯು ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹರಾಗಿರುವುದಿಲ್ಲ, ಆದ್ದರಿಂದ ದಾವೆಯು ಊರ್ಜಿತಗೊಳ್ಳಲು ಯೋಗ್ಯವಾಗಿ ಇರುವುದಿಲ್ಲ. ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

6. 5 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯು ಪ್ರತಿವಾದಿಯರಿಗೆ ನೋಟೀಸು ನೀಡಿರುವುದನ್ನು ಒಪ್ಪಿಕೊಂಡು, ಉಳಿದ ವಾದ ಪತ್ರದ ಅಂಶಗಳನ್ನು

Visit **ecourts.gov.in** for updates or download mobile app "**eCourts Services**" from Android or iOS

ವಾದಿಯೇ ಸಾಬೀತು ಪಡಿಸತಕ್ಕದ್ದು ಎಂದು ಹೇಳಿದ್ದು, ಮುಂದುವರೆದು ವಾದಿಯು ತನ್ನ ಮಗಳನ್ನು 3 ನೇ ಪ್ರತಿವಾದಿ ಶಾಲೆಗೆ ದಾಖಲು ಮಾಡುವ ಸಮಯದಲ್ಲಿ ನೀಡಿದ ಮಾಹಿತಿಯಂತೆ ವಾದಿಯ ಹೆಸರನ್ನು ನಮೂದು ಮಾಡಲಾಗಿದ್ದು, ಅದರಂತೆ ಇತರೆ ಶಾಲಾ ಕಾಲೇಜು ದಾಖಲಾತಿಗಳಲ್ಲಿ ಸದರಿ ಹೆಸರು ಮುಂದುವರೆದಿದ್ದು, ಯಾವುದೇ ಕರ್ತವ್ಯ ಲೋಪ ಇರುವುದಿಲ್ಲ ಹಾಗೂ ಈ ಪ್ರತಿವಾದಿಗೆ ಸದರಿ ತಿದ್ದುಪಡಿ ಮಾಡಲು ಯಾವುದೇ ಅಧಿಕಾರ ಇರುವುದಿಲ್ಲ. ಒಂದು ವೇಳೆ ನ್ಯಾಯಾಲಯವು ವಾದಿಯು ಪ್ರಸ್ತುತ ದಾವೆಯಲ್ಲಿ ತಿದ್ದುಪಡಿಗೆ ಕೇಳಿರುವಂತೆ ಅರ್ಹರು ಎಂದು ಪರಿಗಣಿಸಿದಲ್ಲಿ ವಾದಿಯು ದಾಖಲಾತಿ ಸಮಯದಲ್ಲಿ 4 ನೇ ಪ್ರತಿವಾದಿ ಶಾಲೆಯಿಂದ ತಂದು ಹಾಜರುಪಡಿಸಿರುವ ದಾಖಲೆಗಳಲ್ಲಿ ತಿದ್ದುಪಡಿ ಮಾಡಿಸಿಕೊಂಡು ಹೊಸದಾಗಿ ದಾಖಲಾತಿಗಳನ್ನು ಹಾಜರುಪಡಿಸಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

7. ಮೇಲ್ಕಾಣಿಸಿದ ವಾದ, ಪ್ರತಿವಾದಪತ್ರಗಳ ಸಂಗತಿಗಳ ಮೇಲೆ ಈ ಕೆಳಕಾಣಿಸಿದ ವಿವಾದಾಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತವೆ ಃ

1) Whether the plaintiff proves that his correct name is “C.C.Raju”, in the school records of his daughter namely Aishwarya.C.R., his name was wrongly mentioned as “Rajappa.C.C”?

2) Whether the plaintiff is entitle for the reliefs as sought in the plaint?

3) What order or decree?

8. ಪ್ರಸ್ತುತ ದಾವೆಯನ್ನು ರುಜುವಾತುಪಡಿಸಲು ವಾದಿಯ ತನ್ನನ್ನು ತಾನು ವಾಸಾ-1 ಎಂದು ಸಾಕ್ಷೀಕರಿಸಿದ್ದು, ತನ್ನ ಪರವಾಗಿ ನಿಪಿ-1 ರಿಂದ 11 ದಾಖಲಾತಿಗಳನ್ನು ಗುರ್ತಿಸಿಕೊಂಡಿರುತ್ತಾರೆ. 1 ರಿಂದ 3 ಮತ್ತು 6 ನೇ ಪ್ರತಿವಾದಿಯರ ಪರವಾಗಿ ಸಹಾಯಕ ಸರ್ಕಾರಿ ವಕೀಲರು ಸಾಕ್ಷ್ಯ ಇರುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ. 5 ನೇ ಪ್ರತಿವಾದಿಯ ಪರ ವಕೀಲರು ಸಹ ತಮ್ಮ ಪರವಾಗಿ ಸಾಕ್ಷ್ಯ ಇರುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ.

9. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

10. ಮೇಲ್ಕಾಣಿಸಿದ ವಿವಾದಾಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ ಃ

ವಿವಾದಾಂಶ - 1 ಃ ಸಕಾರಾತ್ಮಕವಾಗಿ,
ವಿವಾದಾಂಶ - 2 ಃ ಸಕಾರಾತ್ಮಕವಾಗಿ,
ವಿವಾದಾಂಶ - 3 ಃ ಅಂತಿಮ ಆದೇಶದಂತೆ,

ಈ ಕೆಳಗಿನ ಕಾರಣಗಳಿಗಾಗಿ,

ಕಾ ರ ಣ ಗ ಳು

11. ವಿವಾದಾಂಶ – **1** ಃ ಪ್ರಸ್ತುತ ದಾವೆಯನ್ನು ರುಜುವಾತುಪಡಿಸಲು ವಾದಿಯು ತನ್ನನ್ನು ತಾನು ವಾಸಾ-1 ಎಂದು ಸಾಕ್ಷೀಕರಿಸಿದ್ದು, ವಾಸಾ-1 ರವರು ತನ್ನ

ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ, ವಾದ ಪತ್ರದ ಅಂಶಗಳನ್ನೇ ಪುನರುಚ್ಛರಿಸಿದ್ದು, ತನ್ನ ಪರವಾಗಿ ನಿಪಿ-1 ರಿಂದ 11 ದಾಖಲಾತಿಗಳನ್ನು ಗುರ್ತಿಸಿಕೊಂಡಿರುತ್ತಾರೆ. ನಿಪಿ-1 ಮತ್ತು 2 ವಾದಿಯ ಮಗಳಾದ ಐಶ್ವರ್ಯ.ಸಿ.ಆರ್. ರವರ ಶಾಲಾ ದೃಢೀಕರಣ ಪತ್ರಗಳು ಇದ್ದು, ನಿಪಿ-3 ವಾದಿಯ ಮಗಳಾದ ಐಶ್ವರ್ಯ.ಸಿ.ಆರ್. ರವರ ವ್ಯಾಸಾಂಗ ದೃಢೀಕರಣ ಪತ್ರಗಳು ಇದ್ದು, ನಿಪಿ-4 ವಾದಿಯ ಮಗಳಾದ ಐಶ್ವರ್ಯ.ಸಿ.ಆರ್. ರವರ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಇದ್ದು, ನಿಪಿ-5 ಐಶ್ವರ್ಯ.ಸಿ.ಆರ್. ರವರ ಭಾಗ್ಯಲಕ್ಷ್ಮಿ ಯೋಜನೆ ಸುರಕ್ಷಾ ಮತ್ತು ವಿಮಾ ಪ್ರಮಾಣ ಪತ್ರ ಇದ್ದು, ನಿಪಿ-6 ಮತ್ತು 7 ಎರಡು ಅಂಚೆ ಸ್ವೀಕೃತಿಗಳು ಇದ್ದು, ನಿಪಿ-8 ವಾದಿಯು ಪ್ರತಿವಾದಿಯರಿಗೆ ದಿನಾಂಕ 23.02.2026 ರಂದು ವಕೀಲರ ಮುಖಾಂತರ ನೀಡಿರುವ ನೋಟೀಸಿನ ಪ್ರತಿ ಇದ್ದು, ನಿಪಿ-9 ವಾದಿಯ ಆಧಾರ್ ಕಾರ್ಡ್ ಇದ್ದು, ನಿಪಿ-10 ವಾದಿಯ ಚುನಾವಣಾ ಗುರುತಿನ ಚೀಟಿ ಹಾಗೂ ನಿಪಿ-11 ವಾದಿಯ ಪಾನ್ ಕಾರ್ಡ್ ಇರುತ್ತದೆ.

12. 1 ರಿಂದ 3 ಮತ್ತು 6 ನೇ ಪ್ರತಿವಾದಿಯರ ಪರವಾಗಿ ಸಹಾಯಕ ಸರ್ಕಾರಿ ವಕೀಲರು ಸಾಕ್ಷ್ಯ ಇರುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ. 5 ನೇ ಪ್ರತಿವಾದಿಯ ಪರ ವಕೀಲರು ಸಹ ತಮ್ಮ ಪರವಾಗಿ ಸಾಕ್ಷ್ಯ ಇರುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ.

13. ವಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ತನ್ನ ಮಗಳಾದ ಐಶ್ವರ್ಯರವರನ್ನು ಶಾಲೆಗೆ ತಾನೇ ಸೇರಿಸಿರುತ್ತೇನೆಂದರೆ ಸರಿ, ಅವರನ್ನು ಶಾಲೆಗೆ ದಾಖಲು

Visit **ecourts.gov.in** for updates or download mobile app "**eCourts Services**" from Android or iOS

ಮಾಡುವ ಸಮಯದಲ್ಲಿ ಎಲ್ಲಾ ವಿವರಗಳನ್ನು ತಾನೇ ನೀಡಿರುತ್ತೇನೆಂದರೆ ಸರಿ, ತಾನು ನೀಡಿದ ಮಾಹಿತಿಯಂತೆ ತಂದೆ ಹೆಸರನ್ನು ರಾಜಪ್ಪ.ಸಿ.ಸಿ. ಎಂದು ಶಾಲೆಯವರು ನಮೂದು ಮಾಡಿರುತ್ತಾರೆಂದರೆ ತಾನು ತನ್ನ ಹೆಸರನ್ನು ಸಿ.ಸಿ.ರಾಜು ಎಂದು ನೀಡಿದ್ದು, ತನ್ನ ಮಗಳು ಓದುತ್ತಿದ್ದ 1 ನೇ ತರಗತಿಯ ಶಾಲೆಯವರು ಮಾಡಿದ ತಪ್ಪಿನಿಂದ ತನ್ನ ಹೆಸರು ರಾಜಪ್ಪ.ಸಿ.ಸಿ. ಎಂದು ಆಗಿರುತ್ತದೆ, ತಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಎಲ್ಲಾ ದಾಖಲಾತಿಗಳಲ್ಲಿ ತನ್ನ ಹೆಸರು ಸಿ.ಸಿ.ರಾಜು ಎಂದು ನಮೂದು ಇರುತ್ತದೆ ಎಂದು ನುಡಿದಿರುತ್ತಾರೆ.

14. ವಾದಿ ಪರ ವಕೀಲರು ತಮ್ಮ ವಾದದಲ್ಲಿ, ವಾದಿಯ ಹೆಸರು ಸಿ.ಸಿ.ರಾಜು ಇದ್ದು, ಅದರೆ ಅದನ್ನು ಕೈತಪ್ಪಿನಿಂದ ವಾದಿಯ ಮಗಳ ಶಾಲಾ ದಾಖಲಾತಿಗಳಲ್ಲಿ "ರಾಜಪ್ಪ.ಸಿ.ಸಿ." ಎಂದು ನಮೂದಿಸಿದ್ದು, ವಾದಿಯ ಹೆಸರನ್ನು ವಾದಿಯ ಮಗಳ ಶಾಲಾ ದಾಖಲಾತಿಗಳಲ್ಲಿ ತಿದ್ದುಪಡಿ ಮಾಡುವುದರಿಂದ ವಾದಿಯ ಮಗಳ ಮುಂದಿನ ವಿದ್ಯಾಭ್ಯಾಸಕ್ಕೆ, ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಲು ಹಾಗೂ ಇತರೆ ಸೌಲಭ್ಯ ಪಡೆಯಲು ಅನುಕೂಲವಾಗುತ್ತದೆ ಎಂದು ತಮ್ಮ ವಾದ ಮಂಡನೆ ಮಾಡಿರುತ್ತಾರೆ. ಪ್ರತಿವಾದಿಯರ ಪರ ವಕೀಲರು ತಮ್ಮ ವಾದದಲ್ಲಿ ವಾದಿಯು ನೀಡಿದ ಮಾಹಿತಿಯ ಆಧಾರದ ಮೇಲೆ ವಾದಿಯ ಹೆಸರನ್ನು ಅವರ ಮಗಳ ಶಾಲಾ ದಾಖಲಾತಿಗಳಲ್ಲಿ ನಮೂದಿಸಿದ್ದು, ಪ್ರತಿವಾದಿಯರ ಕಡೆಯಿಂದ ಯಾವುದೇ ತಪ್ಪಾಗಿರುವುದಿಲ್ಲ ಎಂದು ತಮ್ಮ ವಾದ ಮಂಡನೆ ಮಾಡಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

15. ವಾಸಾ-1 ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ನಿಪಿ-1 ಮುಖ್ಯೋಪಾಧ್ಯಾಯರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆ.ಚಟ್ಟನಹಳ್ಳಿ ಇವರು ನೀಡಿದ ಐಶ್ವರ್ಯ.ಸಿ.ಆರ್. ರವರ ಶಾಲಾ ದೃಢೀಕರಣ ಪತ್ರ ಇದ್ದು ಹಾಗೂ ನಿಪಿ-2 ಮುಖ್ಯೋಪಾಧ್ಯಾಯರು, ಅಕ್ಷರ ವಿದ್ಯಾನಿಕೇತನ ಅಂಗ್ಲ ಪ್ರೌಢಶಾಲೆ, ಚಿಕ್ಕಜಾಜೂರು ಇವರು ನೀಡಿದ ಐಶ್ವರ್ಯ.ಸಿ.ಆರ್. ರವರ ಶಾಲಾ ದೃಢೀಕರಣ ಪತ್ರ ಇದ್ದು, ನಿಪಿ-3 ಪ್ರಾಂಶುಪಾಲರು, ರಾಘವೇಂದ್ರ ಹೈಟೆಕ್ ಪ್ರಿಯುನಿರ್ವಸಿಟಿ, ದಾವಣಗೆರೆ ಇವರು ನೀಡಿದ ವ್ಯಾಸಾಂಗ ದೃಢೀಕರಣ ಪತ್ರ ಇದ್ದು ಹಾಗೂ ನಿಪಿ-4 ಐಶ್ವರ್ಯ.ಸಿ.ಆರ್. ರವರ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಇದ್ದು, ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ಸದರಿ ದಾಖಲೆಗಳಲ್ಲಿ ಐಶ್ವರ್ಯ.ಸಿ.ಆರ್. ರವರ ತಂದೆಯ ಹೆಸರು ಅಂದರೆ ವಾದಿಯ ಹೆಸರು ರಾಜಪ್ಪ.ಸಿ.ಸಿ. ಎಂದು ನಮೂದಿಸಿರುವುದು ಕಂಡುಬರುತ್ತದೆ. ಆದರೆ ನಿಪಿ-9 ವಾದಿಯ ಆಧಾರ್ ಕಾರ್ಡ್, ನಿಪಿ-10 ಚುನಾವಣಾ ಗುರುತಿನ ಚೀಟಿ ಹಾಗೂ ನಿಪಿ-11 ಪಾನ್ ಕಾರ್ಡ್ ಗಳನ್ನು ಗಮನಿಸಿದಾಗ ವಾದಿಯ ಹೆಸರು ಸದರಿ ದಾಖಲೆಗಳಲ್ಲಿ ಸಿ.ಸಿ.ರಾಜು ಎಂದು ನಮೂದಿಸಿರುವುದು ಕಂಡುಬರುತ್ತದೆ. ನಿಪಿ-6 ರಿಂದ 8 ನ್ನು ಪರಿಶೀಲಿಸಲಾಗಿ ವಾದಿಯು ಪ್ರತಿವಾದಿಯರಿಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿದ್ದು ಸದರಿ ನೋಟೀಸ್ 2 ಮತ್ತು 6 ನೇ ಪ್ರತಿವಾದಿಯರಿಗೆ ತಲುಪಿರುವುದು ಕಂಡುಬರುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

16. ವಾದಿ ಮತ್ತು ಪ್ರತಿವಾದಿಯರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಶಾಲಾ ದಾಖಲೆಗಳಾದ ನಿಪಿ-1 ರಿಂದ 4 ನ್ನು ಪರಿಶೀಲಿಸಲಾಗಿ ಸದರಿ ದಾಖಲೆಯಲ್ಲಿ ಐಶ್ವರ್ಯ.ಸಿ.ಆರ್. ರವರ ತಂದೆಯ ಹೆಸರು ಅಂದರೆ ವಾದಿಯ ಹೆಸರು ರಾಜಪ್ಪ.ಸಿ.ಸಿ. ಎಂದು ನಮೂದಿಸಿದ್ದು, ಆದರೆ ವಾದಿಗೆ ಸಂಬಂಧಿಸಿದ ನಿಪಿ-9 ರಿಂದ 11 ರ ದಾಖಲಾತಿಗಳನ್ನು ಗಮನಿಸಿದಾಗ ಸದರಿ ದಾಖಲೆಗಳಲ್ಲಿ ವಾದಿಯ ಹೆಸರು ಸಿ.ಸಿ.ರಾಜು ಎಂದು ನಮೂದು ಮಾಡಿರುವುದು ಕಂಡುಬರುತ್ತದೆ.

17. ಪ್ರಸ್ತುತ ದಾವೆಯ ಸಂಗತಿ ಮತ್ತು ಸಂದರ್ಭಗಳನ್ನು ಪರಿಗಣಿಸಲಾಗಿ, ವಾದಿಯ ಶಾಲಾ ದಾಖಲಾತಿಗಳಲ್ಲಿನ ವಾದಿಯ ಹೆಸರನ್ನು ತಿದ್ದುಪಡಿ ಮಾಡುವ ಬಗ್ಗೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ತೀರ್ಪನ್ನು ಈ ದಾವೆಯಲ್ಲಿ ಉಲ್ಲೇಖಿಸಲು ಈ ನ್ಯಾಯಾಲಯವು ಇಚ್ಛಿಸುತ್ತದೆ ಃ

***September 2010. Karnataka Court***
***Master Rohit Kannan M. V/s. State of Karnataka.***

*14. As per the Change of Name Act and also the Government Notification dated 17.2.1998, unless the parties produce the decree from the competent Civil Court, change of name cannot be made. The change of name is the discretion of the students, if they are major and if they are minor, the parents have got right to change the name for the welfare of their children.*

*As per the Circular issued by the State Government, the appellant has filed a suit seeking for declaration of change of name. The reason assigned by the trial Court to dismiss the suit is contrary to*

*law. The Act provides for change of name. In addition to that, the Government Notification dated 17.2.1998 and also by the recent Notification dated 26.10.2015, the Government has clarified to the Government Institutions that if the students or the parents of the wards bring a decree from the Civil Court, then only the School Authorities shall make necessary correction for change of name and also date of birth.*

18. ಮೇಲೆ ತಿಳಿಸಿದ ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪಿನ ಅಂಶಗಳಂತೆ, ಹೆಸರು ಬದಲಾವಣೆ ಕಾಯ್ದೆ ಹಾಗೂ ಸರ್ಕಾರದ ಅಧಿಸೂಚನೆ ಮೇರೆಗೆ, ಶಾಲಾ ಕಾಲೇಜುಗಳಲ್ಲಿನ ದಾಖಲೆಗಳಲ್ಲಿ ಸಿವಿಲ್ ನ್ಯಾಯಾಲಯದ ಡಿಕ್ರಿ ಇಲ್ಲದೆ ವಿದ್ಯಾರ್ಥಿ ಅಥವಾ ಪೋಷಕರ ಹೆಸರು ಬದಲಾಯಿಸಲು ಬರುವುದಿಲ್ಲವೆಂದು ಹಾಗೂ ಹೆಸರು ಬದಲಾಯಿಸುವುದು ವಿದ್ಯಾರ್ಥಿಯ ಇಚ್ಛೆಯಾಗಿದ್ದು ಅಥವಾ ಅವರು ಅಪ್ರಾಪ್ತರಾಗಿದ್ದರೆ ಅವರ ಪೋಷಕರು ಸದರಿ ವಿದ್ಯಾರ್ಥಿಯ ಕ್ಷೇಮಕ್ಕಾಗಿ ಹೆಸರನ್ನು ಬದಲಾಯಿಸಲು ಹಕ್ಕುವುಳ್ಳವರಾಗಿರುತ್ತಾರೆಂದು ತಿಳಿಸಿದ್ದು, ಸದರಿ ಹಕ್ಕನ್ನು ಹೆಸರು ಬದಲಾವಣೆ ಕಾಯ್ದೆ ಅಡಿಯಲ್ಲಿ ನೀಡಲಾಗಿದೆ ಎಂದು ತಿಳಿಸಲಾಗಿರುತ್ತದೆ.

19. ಪ್ರಸ್ತುತ ದಾವೆಯಲ್ಲಿ ವಾಸಾ-1 ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ನಿಪಿ-1 ರಿಂದ 4 ರ ದಾಖಲೆಗಳಂತೆ ವಾದಿಯ ಮಗಳಾದ ಐಶ್ವರ್ಯ.ಸಿ.ಆರ್. ರವರ ಶಾಲಾ ದಾಖಲಾತಿಗಳಲ್ಲಿ ವಾದಿಯ ಹೆಸರು ರಾಜಪ್ಪ.ಸಿ.ಸಿ. ಎಂದು ನಮೂದಾಗಿರುವುದು ಕಂಡುಬರುತ್ತದೆ. ಆದರೆ ಮುಖ್ಯವಾಗಿ

Visit **ecourts.gov.in** for updates or download mobile app "**eCourts Services**" from Android or iOS

ನಿಪಿ-9 ರಿಂದ 11 ರ ದಾಖಲೆಗಳನ್ನು ಗಮನಿಸಿದಾಗ ಸದರಿ ದಾಖಲೆಗಳಲ್ಲಿ ವಾದಿಯ ಹೆಸರು ಸಿ.ಸಿ.ರಾಜು ಎಂದು ನಮೂದಾಗಿರುವುದು ಕಂಡುಬರುತ್ತದೆ. ಆದ್ದರಿಂದ ವಾದಿಯ ಹೆಸರು ಸಿ.ಸಿ.ರಾಜು ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ ಹಾಗೂ ಸದರಿ ಸಿ.ಸಿ.ರಾಜು ರವರ ಹೆಸರು ವಾದಿಯ ಮಗಳ ಶಾಲಾ ದಾಖಲೆಗಳಲ್ಲಿ ರಾಜಪ್ಪ.ಸಿ.ಸಿ. ಎಂದು ತಪ್ಪಾಗಿ ನಮೂದಾಗಿರುವುದು ನಿಪಿ-1 ರಿಂದ 4 ರ ದಾಖಲಾತಿಗಳಿಂದ ಕಂಡುಬರುತ್ತದೆ. ಆದ್ದರಿಂದ ಉಭಯ ಪಕ್ಷಗಾರರ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಹಾಗೂ ಅವರ ಪರ ವಕೀಲರ ವಾದವನ್ನು ಪರಿಗಣಿಸಲಾಗಿ ವಾದಿಯ ಹೆಸರು ಸಿ.ಸಿ.ರಾಜು ಎಂದು ಇದ್ದು, ಆದರೆ ವಾದಿಯ ಮಗಳಾದ ಐಶ್ವರ್ಯ.ಸಿ.ಆರ್. ರವರ ನಿಪಿ-1 ರಿಂದ 4 ರ ಶಾಲಾ ದಾಖಲಾತಿಗಳಲ್ಲಿ ರಾಜಪ್ಪ.ಸಿ.ಸಿ. ಎಂದು ನಮೂದಾಗಿರುತ್ತದೆ ಎಂದು ವಾದಿಯು ರುಜುವಾತು ಪಡಿಸಿದ್ದಾರೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಆದ್ದರಿಂದ ವಿವಾದಾಂಶ-1 ನ್ನು ಸಕಾರಾತ್ಮಕ ಎಂದು ಉತ್ತರಿಸಲಾಗಿದೆ.

20. <u>ವಿವಾದಾಂಶ – **2**</u> ಃ ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ತನ್ನ ಹೆಸರು ಸಿ.ಸಿ.ರಾಜು ಎಂದು ಇದ್ದು, ತನ್ನ ಮಗಳಾದ ಐಶ್ವರ್ಯ.ಸಿ.ಆರ್. ರವರ ಶಾಲಾ ದಾಖಲಾತಿಗಳಲ್ಲಿ ತಂದೆಯ ಹೆಸರು ರಾಜಪ್ಪ.ಸಿ.ಸಿ ಎಂದು ತಪ್ಪಾಗಿ ನಮೂದಾಗಿದ್ದನ್ನು ಸಿ.ಸಿ.ರಾಜು ಎಂದು ತಿದ್ದುಪಡಿ ಮಾಡುವಂತೆ ನಿರ್ದೇಶನಾತ್ಮಕ ಪರಿಹಾರ ಕೋರಿ ಸಲ್ಲಿಸಿದ್ದು, ವಿವಾದಾಂಶ-1 ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಹಾಗೂ ಅದಕ್ಕೆ ನೀಡಿದ ಉತ್ತರಕ್ಕಾಗಿ, ವಾದಿಯ ಹೆಸರು ಸಿ.ಸಿ.ರಾಜು ಎಂದು ಇದ್ದು, ಅವರ

Visit **ecourts.gov.in** for updates or download mobile app "**eCourts Services**" from Android or iOS

ಮಗಳಾದ ಐಶ್ವರ್ಯ.ಸಿ.ಆರ್. ರವರ ಶಾಲಾ ದಾಖಲಾತಿಗಳಲ್ಲಿ ತಂದೆಯ ಹೆಸರು ರಾಜಪ್ಪ.ಸಿ.ಸಿ ಎಂದು ತಪ್ಪಾಗಿ ನಮೂದಿಸಲಾಗಿದೆ ಎನ್ನುವ ಅಂಶವನ್ನು ವಾದಿಯು ರುಜುವಾತುಪಡಿಸಿದ್ದು, ಆದ್ದರಿಂದ ವಾದಿಯು ದಾವೆಯಲ್ಲಿ ಕೇಳಿದಂತೆ ಪರಿಹಾರ ಪಡೆಯಲು ಅರ್ಹರಿರುತ್ತಾರೆಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಆದ್ದರಿಂದ ವಿವಾದಾಂಶ-2 ನ್ನು ಸಕಾರಾತ್ಮಕ ಎಂದು ಉತ್ತರಿಸಲಾಗಿದೆ.

21. **ವಿವಾದಾಂಶ - 3** ಃ ಈ ಮೇಲ್ಕಂಡ ವಿವಾದಾಂಶ-1 ಮತ್ತು 2 ನ್ನು ನಿರ್ಣಯಿಸಲಾಗಿ ಮತ್ತು ಅವುಗಳಿಗೆ ನೀಡಿದ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ವಾದಿಯು ಸಲ್ಲಿಸಿದ ದಾವೆಯನ್ನು ಡಿಕ್ರಿ ಮಾಡಲಾಗಿದೆ.

1 ರಿಂದ 5 ನೇ ಪ್ರತಿವಾದಿಯರು ವಾದಿಯ ಮಗಳಾದ ಐಶ್ವರ್ಯ.ಸಿ.ಆರ್. ರವರ ಶಾಲಾ ದಾಖಲಾತಿಗಳಲ್ಲಿ ಐಶ್ವರ್ಯ.ಸಿ.ಆರ್. ರವರ ತಂದೆಯ ಹೆಸರು "ರಾಜಪ್ಪ.ಸಿ." ಬದಲಿಗೆ "ಸಿ.ಸಿ.ರಾಜು" ಎಂದು ಈ ಆದೇಶವಾದ ಎರಡು ತಿಂಗಳ ಒಳಗಾಗಿ ತಿದ್ದುಪಡಿ ಮಾಡಿಕೊಡಲು ಈ ಮೂಲಕ ನಿರ್ದೇಶಿಸಲಾಗಿದೆ.

ಉಭಯ ಪಕ್ಷಗಾರರು ತಮ್ಮ ಖರ್ಚುಗಳನ್ನು ತಾವೇ ಭರಿಸಿಕೊಳ್ಳತಕ್ಕದ್ದು.

ಈ ಪ್ರಕಾರ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು

Visit **ecourts.gov.in** for updates or download mobile app "**eCourts Services**" from Android or iOS

KACM710008922026

ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 18 ನೇ ಜುಲೈ 2026 ರಂದು ಘೋಷಿಸಲಾಯಿತು)

URMILA V Digitally signed by URMILA V Date: 2026.07.30 14:03:27 +0530

ಸಹಿ
( ಊರ್ಮಿಳ.ವಿ )
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

## ಅನುಬಂಧ

ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-

ವಾಸಾ-1 ಃ ಸಿ.ಸಿ.ರಾಜು

ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

ನಿಪಿ-1 ಮತ್ತು 2 ಃ ಶಾಲಾ ದೃಢೀಕರಣ ಪತ್ರಗಳು
ನಿಪಿ-3 ಃ ವ್ಯಾಸಾಂಗ ದೃಢೀಕರಣ ಪತ್ರ
ನಿಪಿ-4 ಃ ಎಸ್.ಎಸ್.ಎಲ್.ಸಿ. ಅಂಕಪಟ್ಟಿ
ನಿಪಿ-5 ಃ ಭಾಗ್ಯಲಕ್ಷ್ಮಿ ಯೋಜನೆ ಸುರಕ್ಷಾ ಮತ್ತು ವಿಮಾ ಪ್ರಮಾಣ ಪತ್ರ
ನಿಪಿ-6 ಮತ್ತು 7 ಃ ಎರಡು ಅಂಚೆ ಸ್ವೀಕೃತಿಗಳು
ನಿಪಿ-8 ಃ ದಿನಾಂಕ 23.02.2026 ರ ವಕೀಲರ ನೋಟೀಸಿನ ಪ್ರತಿ
ನಿಪಿ-9 ಃ ವಾದಿಯ ಆಧಾರ್ ಕಾರ್ಡ್
ನಿಪಿ-10 ಃ ಚುನಾವಣಾ ಗುರುತಿನ ಚೀಟಿ
ನಿಪಿ-11 ಃ ಪಾನ್ ಕಾರ್ಡ್

ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-

- ಇಲ್ಲ -

ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

- ಇಲ್ಲ -

URMILA V Digitally signed by URMILA V Date: 2026.07.30 14:03:21 +0530

ಸಹಿ
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app "**eCourts Services**" from Android or iOS